ವಿವೇಕಪ್ರಭ ವಿಶೇಷ ಸಂಚಿಕೆ – ಜನವರಿ ೨೦೧೫

# ‘ನಾಮಮಹಿಮೆ’

2015ರ ಜನವರಿ ಸಂಚಿಕೆಯು **‘ನಾಮಮಹಿಮೆ’** ಎಂಬ ವಿಷಯವನ್ನು ಕುರಿತ ವಿಶೇಷ ಸಂಚಿಕೆಯಾಗಿ ಹೊರಬರಲಿದೆ. ಆಧ್ಯಾತ್ಮಿಕ ಜೀವನದಲ್ಲಿ ಭಗವಂತನ ನಾಮಕ್ಕೆ ಅತ್ಯಂತ ಪ್ರಮುಖವಾದ ಸ್ಥಾನವಿದೆ. ಅವ್ಯಕ್ತವಾದ, ಮನಸ್ಸು-ಬುದ್ಧಿಗಳಿಗೆ ಎಟುಕದ ಭಗವಂತನ ಇರುವಿಕೆಯನ್ನು ಅನುಭವಕ್ಕೆ ತಂದುಕೊಳ್ಳಲು ಅವನ ನಾಮವೇ ಅತ್ಯುತ್ತಮವಾದ ಸಾಧನ; ಅವನ ನಾಮದ ಮಹಿಮೆ ಅಪಾರ. ಭಗವಂತನ ನಾಮದ ಉಚ್ಚಾರಣೆ, ಜಪಸಾಧನೆ, ಮಂತ್ರಜಪ ಇತ್ಯಾದಿ ಆಚರಣೆಗಳು ಎಲ್ಲ ಧರ್ಮಗಳಲ್ಲಿ, ಎಲ್ಲ ಆಧ್ಯಾತ್ಮಿಕ ಪರಂಪರೆಗಳಲ್ಲಿ ಕಂಡುಬರುತ್ತವೆ. ಈ ವಿಷಯಕ್ಕೆ ಸಂಬಂಧಿಸಿದ ವೈವಿಧ್ಯಮಯವಾದ ಲೇಖನಗಳು, ಹಲವು ಕಥೆ-ದೃಷ್ಟಾಂತ-ನೈಜ ಘಟನೆಗಳನ್ನೊಳಗೊಂಡ ಬರಹಗಳು, ಶಾಸ್ತ್ರಗ್ರಂಥಗಳು ಮತ್ತು ಹಲವು ಮಹಾಪುರುಷರು ನಾಮಮಹಿಮೆಯನ್ನು ಕುರಿತು ಹೇಳಿದ ವಿಚಾರಗಳು ಇಲ್ಲಿವೆ. ಆಧ್ಯಾತ್ಮಿಕ ಸಾಧಕರಿಗೆ ಅತ್ಯಮೂಲ್ಯವಾದ ಮಾಹಿತಿಗಳನ್ನು ಒದಗಿಸುವ ಒಂದು ಸಂಗ್ರಹಯೋಗ್ಯ ಕೈಪಿಡಿಯಾಗಿದೆ ಈ ಸಂಚಿಕೆ.

**ಈ ಅಪೂರ್ವ ಸಂಚಿಕೆಯನ್ನು ನಮ್ಮ ಚಂದಾದಾರರಿಗೆ ಉಚಿತವಾಗಿಯೇ ಕಳುಹಿಸಿಕೊಡಲಾಗುವುದು. 10ಕ್ಕಿಂತ ಹೆಚ್ಚಿನ ಪ್ರತಿಗಳನ್ನು ಕೊಂಡುಕೊಳ್ಳಬಯಸುವವರಿಗೆ ಶೇ. 15 ರಿಯಾಯಿತಿ ನೀಡಲಾಗುವುದು.**

**ಬೆಲೆ : ರೂ. 75/-   ಪುಟಗಳು ಸುಮಾರು 142**

ಹೆಚ್ಚಿನ ಪ್ರತಿಗಳನ್ನು ಕಾದಿರಿಸಲು ಇಂದೇ ಸಂಪರ್ಕಿಸಿ :

**‘ವಿವೇಕಪ್ರಭ ವಿಭಾಗ’, ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ, ಮೈಸೂರು 570 020**

Email: **kannada.vivekaprabha@gmail.com; vivekaprabha@hotmail.com**

ಫೋನ್ : 9481533505



**ಕೋಣೆಗೆ ದೀಪವನ್ನು ತಂದೊಡನೆಯೆ ಶತಮಾನಗಳಿಂದ ಇದ್ದ ಕತ್ತಲೆ ಪಲಾಯನ ಮಾಡುವುದು. ಹಲವು ಜನ್ಮಾಂತರಗಳಿಂದ ಸಂಚಿತವಾದ ಪಾಪವೆಲ್ಲ ಒಮ್ಮೆ ಅವನ ಕರುಣಾಕಟಾಕ್ಷದಿಂದ ಮಾಯವಾಗುವುದು.**

– ಶ್ರೀರಾಮಕೃಷ್ಣ



**ಭಗವಂತ ನಮ್ಮೆಲ್ಲರ ‘‘ಸರ್ವಸ್ವ.’’ ಇದು ಶಾಶ್ವತ ಸಂಬಂಧ. ಭಗವಂತನ ಬಗೆಗೆ ನಮಗಿರುವ ಭಾವನೆಯ ತೀವ್ರತೆಗನುಗುಣವಾಗಿ ನಾವು ಅವನನ್ನು ಸಾಕ್ಷಾತ್ಕರಿಸುತ್ತೇವೆ, ಹೆದರಬೇಡ. ನಿನ್ನನ್ನು ಸದಾ ಒಬ್ಬರು ರಕ್ಷಿಸುತ್ತಿದ್ದಾರೆ ಎಂದು ಯಾವಾಗಲೂ ನೆನೆ.**

– ಶ್ರೀಶಾರದಾದೇವಿ



**ಭಗವಂತನ ಮತ್ತು ಅವನ ಪರಮಾಪ್ತ ಭಕ್ತರ ಕೃಪೆಯನ್ನು ಪಡೆಯಿರಿ. ಅವನನ್ನು ಪಡೆಯುವುದಕ್ಕೆ ಇವೆರಡೇ ದಾರಿ. ಪ್ರಪಂಚದಲ್ಲಿ ಇಂತಹ ಭಕ್ತರ ಸಂಗ ಬಹಳ ದುರ್ಲಭ. ಐದು ನಿಮಿಷದ ಅವರ ಸಹವಾಸದಿಂದ ಇಡೀ ಜೀವನವೇ ಬದಲಾಗುವುದು.**

– ಸ್ವಾಮಿ ವಿವೇಕಾನಂದ